# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 16-03-2021 ಪ್ರಶ್ನೆ ಸಂಖ್ಯೆ : 1113 (1371)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 16-03-2021

ಉತ್ತರಿಸುವ ಸಚಿವರು: ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು

ವಿಷಯ : ರಾಜ್ಯದಲ್ಲಿ ಗಣಿ ಇಲಾಖೆಯಿಂದ ಸಂಗ್ರಹವಾಗುವ ರಾಜಧನದ ಕುರಿತು

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಗಣಿಗಾರಿಕೆಯಿಂದ ಸಂಗ್ರಹವಾದ ರಾಜಧನವೆಷ್ಟು; ದಂಡನೆಯ ಮೂಲಕ ಸಂಗ್ರಹವಾದ ಮೊತ್ತವೆಷ್ಟು; (ವರ್ಷವಾರು, ಜಿಲ್ಲಾವಾರು, ತಾಲ್ಲೂಕುವಾರು, ಗಣಿಪ್ರಕಾರವಾರು ಮಾಹಿತಿಯನ್ನು ಒದಗಿಸುವುದು)

(ಆ) ಉಡುಪಿ ಜಿಲ್ಲೆಯಲ್ಲಿ ದ್ರೋಣ್ ಸರ್ವೆಯ (DRONE SUVEY) ಮೂಲಕ ಗುರುತಿಸಲಾದ ಗಣಿ ಪ್ರದೇಶಗಳು ಯಾವುವು; (ಗಣಿ ಪ್ರದೇಶವಾರು ಮಾಹಿತಿಯನ್ನು ನೀಡುವುದು) Ground survey ಯ ಮೂಲಕ ಗುರುತಿಸಲಾದ ಗಣಿ ಪ್ರದೇಶಕ್ಕೂ ದ್ರೋಣ್ ಸರ್ವೆಯ (DRONE SUVEY)ನಲ್ಲಿ ಗುರುತಿಸಲಾದ ಗಣಿ ಪ್ರದೇಶಕ್ಕೂ ವ್ಯತ್ಯಾಸವಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಪ್ರಕರಣವಾರು ವಿವರ ನೀಡುವುದು)

(ಇ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳಿಗೆ ನೀಡಲಾದ ಕಟ್ಟಡ ಕಲ್ಲು, ಜೆಲ್ಲಿ ಮತ್ತು ಮರಳು ಇವುಗಳ ಪ್ರಮಾಣವೆಷ್ಟು; ಇವುಗಳಿಂದ ಇಲಾಖೆಗೆ ಬಂದ ರಾಜಧನವೆಷ್ಟು; ಇವುಗಳನ್ನು ತುಲನಾತ್ಮಕವಾಗಿ ಪರಿಶೀಲಿಸಲಾಗಿದೆಯೇ; ಇಲ್ಲವಾದಲ್ಲಿ, ಕೋಟ್ಯಾಂತರ ರೂಪಾಯಿ ರಾಜಧನ ಸೋರಿಕೆಗೆ ಕಾರಣರಾದ ಇಲಾಖಾಧಿಕಾರಿಗಳನ್ನು ಹೊಣೆ ಮಾಡಲಾಗಿದೆಯೇ? (ಪ್ರಕರಣವಾರು ವಿವರ ನೀಡುವುದು)